# ಕೊನೆಯ ಹಂತದ ಕ್ಯಾನ್ಸರ್ ಪೀಡಿತರಿಗೆ ಆಶಾಕಿರಣ



**ಈ ಕ್ಯಾನ್ಸರ್ ಶುಶ್ರೂಷಾ ಕೇಂದ್ರ ಕೊನೆಯ ಹಂತದ ಕ್ಯಾನ್ಸರ್ ಪೀಡಿತರಿಗೆ ಆಸರೆ ನೀಡುತ್ತದೆ. ಬದುಕಿನ ಅಂತಿಮ ಕ್ಷಣಗಳನ್ನು ಚೆನ್ನಾಗಿ ಕಳೆಯಲೆಂದೇ ಈ ಕಲ್ಯಾಣಪುರದಲ್ಲಿ ಗೊರಟ್ಟಿ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ.**

■ ಚಿತ್ರ – ಬರಹ: **ವಿ.ಬಾಲಕೃಷ್ಣ ಶಿರ್ವ**

ಉಡುಪಿ ಸಮೀಪದ ಕಲ್ಯಾಣಪುರದ ಸಿಂಥಿಯ ಅವರು ಕ್ಯಾನ್ಸರ್‌ನಿಂದ ಬಳಲಿ ಸಾಕಷ್ಟು ನೋವು, ಅಳಲು, ರೋದನ ಅನುಭವಿಸಿದ್ದರು. ತಾವು ಅನುಭವಿಸಿದ ತೀವ್ರ ನೋವು ಅವರಲ್ಲಿ ಸಮಾಜ ಸೇವೆ ಮಾಡುವ ಹುಮ್ಮಸ್ಸು ತುಂಬಿತ್ತು. ತಮ್ಮ ಹಾಗೇ ಕ್ಯಾನ್ಸರ್‌ನಿಂದ ಬಳಲುವ ಇತರರ ಕಣ್ಣೀರು ಒರೆಸುವ ಕೆಲಸ ಮಾಡಲು ಉತ್ಸುಕರಾಗಿದ್ದರು. ಕ್ಯಾನ್ಸರ್ ಪೀಡಿತರು ಅದರಲ್ಲೂ ಜೀವನದ ಕೊನೆಯ ಹಂತದಲ್ಲಿರುವವರು ಎಲ್ಲರಿಂದ ತಿರಸ್ಕರಿಸಲ್ಪಡುತ್ತಾರೆ. ಅವರು ಸಂತೋಷದಿಂದ ಇರಬೇಕು ಎಂಬ ಮಹತ್ತರ ಉದ್ದೇಶದಿಂದ ಒಂದು ಆರೋಗ್ಯ ಕೇಂದ್ರ ಸ್ಥಾಪಿಸಬೇಕೆಂಬುದು ಅವರ ಬಯಕೆಯಾಗಿತ್ತು. ಹೀಗಾಗಿಯೇ ಹುಟ್ಟಿಕೊಂಡ ಸಂಸ್ಥೆಯೇ ಕಲ್ಯಾಣಪುರದ ಸಿಂಥಿಯ ಫೆರ್ನಾಂಡಿಸ್ ಸ್ಮಾರಕ ಆರೈಕಾ ಕೇಂದ್ರ.

ಸಿಂಥಿಯ ಅವರು ಕ್ಯಾನ್ಸರ್‌ನಿಂದ ಬಳಲಿ ಸಾಯುವಾಗ ತನ್ನ ಪತಿಯನ್ನು ಕರೆದು 'ನನ್ನ ಕೊನೇ ಆಸೆಯನ್ನು ಈಡೇರಿಸುತ್ತೀರಾ? ಹಾಗಿದ್ದರೆ ಕೊನೆಯ ಹಂತದಲ್ಲಿ ಅಪಾರ ನೋವು, ಹಿಂಸೆ, ಸೆಳೆತ ಅನುಭವಿಸುವ ಮಂದಿಗಾಗಿ ಪ್ರಶಾಂತವಾದ ಪ್ರದೇಶದಲ್ಲಿ ಪ್ರಾಣ ಹೋಗುವ ಕಾಲದಲ್ಲೂ, ನೆಮ್ಮದಿಯಿಂದ ಸಾವನ್ನಪ್ಪಲು ಒಂದು ಆರೈಕಾ ಕೇಂದ್ರ ಕಟ್ಟಿ' ಎಂದರಂತೆ. ಆಗ ಅವರ ಪತಿ ಕಣ್ಣೀರು ತುಂಬಿಕೊಂಡು 'ನಾನು ಈಡೇರಿಸುತ್ತೇನೆ' ಎಂಬ ಭರವಸೆ ಕೊಟ್ಟರು. ಅದರ ಫಲವೇ ಗೊರಟ್ಟಿ ಆಸ್ಪತ್ರೆ ಸ್ಥಾಪನೆಯಾಗಿ ಕ್ಯಾನ್ಸರ್‌ಪೀಡಿತರ ಆಶಾಕಿರಣವಾಗಿ ಪರಿಣಮಿಸಿದೆ.

ಈ ಕೇಂದ್ರವು 2006ರಲ್ಲಿ ಸ್ಥಾಪಿಸಲಾಗಿದ್ದು, ಸಿಂಥಿಯ ಅವರ ಪತಿ ಲೆಸ್ಲಿ ಫೆರ್ನಾಂಡಿಸ್ ಕಟ್ಟಡ ಕಟ್ಟಿ ದಾನವಾಗಿ ನೀಡಿದ್ದಾರೆ. ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಯಶಸ್ವಿಯಾಗದೆ, ಕ್ಯಾನ್ಸರ್ ಉಲ್ಬಣಿಸಿದ ರೋಗಿಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗುವುದು. ಡಾಕ್ಟರರು ಎಲ್ಲಾ ಚಿಕಿತ್ಸೆ ನೀಡಿದರೂ ದೇಹವಿಡೀ ವ್ಯಾಪಿಸಿ ಅವರನ್ನು ಗುಣಮುಖರಾಗಲು ಮಾಡುವಲ್ಲಿ ಅಸಮರ್ಥರಾದರೂ ನೋವು, ಸೆಳೆತ ನಿವಾರಿಸಲು ಔಷಧಿ ನೀಡಿ ಅವರಿಗೆ ದೈಹಿಕವಾಗಿ ಆರಾಮ, ಮಾನಸಿಕವಾಗಿ ಕುಂದದಂತೆ ನೋಡಿಕೊಂಡು ಆರಾಮವಾಗಿ ಸಾಯುವವರೆಗೂ ಅವರ ಆರೈಕೆ ಮಾಡುತ್ತದೆ ಈ ಆರೋಗ್ಯ ಕೇಂದ್ರ.



ಸಿಂಥಿಯ ಫೆರ್ನಾಂಡಿಸ್ ಸ್ಮಾರಕ ಆರೈಕಾ ಕೇಂದ್ರದ ನೋಟ

ಈ ಶಾಮಕ ಆರೈಕಾ ಕೇಂದ್ರ ನಿರ್ವಹಿಸುವ ಪ್ರಮುಖ ಕಾರ್ಯಗಳೆಂದರೆ ಒಂದು ತಿಂಗಳೊಳಗೆ ಕೊನೆ ಉಸಿರೆಳೆಯುವ ಇಂತಹ ಚಿಂತಾಜನಕ ಪರಿಸ್ಥಿತಿಯಲ್ಲಿ ರೋಗಿಗಳನ್ನು ಸೇರಿಸಿಕೊಳ್ಳುವುದು. ಅವರನ್ನು ಪ್ರೀತಿ, ಪ್ರೇಮ, ವಾತ್ಸಲ್ಯದಿಂದ ನೋಡಿಕೊಳ್ಳುವುದು, ರೋಗಿಯ ಅತೀವ ನೋವು, ಸೆಳೆತ ಕಡಿಮೆಗೊಳಿಸುವುದು, ರೋಗಿಗೆ ಕೊನೆಯ ಹಂತದಲ್ಲಿ ಉಂಟಾಗುವ ವಾಂತಿ, ಮಲಬದ್ಧತೆ, ಉಸಿರಾಟದ ತೊಂದರೆಗಳನ್ನು ನಿಯಂತ್ರಿಸುವುದು, ಮಲಗಿದಲ್ಲೇ ಗಾಯವಾಗಿದ್ದು, ವ್ರಣವಾಗಿರುವ ರೋಗಿಗಳ ಗಾಯಗಳನ್ನು ತೊಳೆದು, ಮದ್ದು ಹಚ್ಚಿ ನೋವು ಶಮನ ಗೊಳಿಸುವುದು, ಶಾಮಕ ಆರೈಕೆಯ ಬಗ್ಗೆ ರೋಗಿಯ ಜೊತೆಯಲ್ಲಿರುವ ವ್ಯಕ್ತಿಗಳಿಗೂ ಮಾಹಿತಿ ನೀಡುವುದು.

ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿ ಜೀವನದ ಕೊನೆಯ ಹಂತದಲ್ಲಿದ್ದರೂ ರೋಗಿಗಳ ಮುಖದಲ್ಲಿ ಲವಲವಿಕೆ ಇರುತ್ತದೆ, ತ್ತು, ಕೊನೆಯ ಹಂತದಲ್ಲೂ ಎಲ್ಲರೊಂದಿಗೆ ಮಾತನಾಡುತ್ತಾರೆ, ಸಂಬಂಧಿಕರು ಬಂದಾಗ ಖುಷಿಯಿಂದ ಸ್ವಾಗತಿಸಿ, ನಗು ನಗುತ್ತಾ ಕಳುಹಿಸಿ ಕೊಡುತ್ತಾರೆ. ಇದು ಭಾವನಾತ್ಮಕ ಸಂವೇದನೆ ಉಂಟು ಮಾಡುವ ವಿಷಯ.

ಈ ಆರೈಕೆ ಕೇಂದ್ರದಲ್ಲಿ ಪ್ರತಿಯೊಬ್ಬ ರೋಗಿಗೂ ಒಂದು ಕೋಣೆಯಿದ್ದು ಸ್ನಾನಗೃಹ, ಶೌಚಾಲಯ ಹೊಂದಿದೆ. ಇಂತಹ 14ಕ್ಕೂ ಹೆಚ್ಚು ರೂಮ್‌ಗಳಿವೆ. ರೋಗಿಗಳಿಗೆ ಊಟ, ವೈದ್ಯಕೀಯ ಸೌಲಭ್ಯವನ್ನು ಉಚಿತವಾಗಿ ನೀಡಲಾಗುವುದು. ಆರೈಕೆ ಮಾಡಲು ದಾದಿಯರಿದ್ದು ಆತ್ಮೀಯವಾಗಿ ನಗು ಮುಖದಿಂದ ಆರೈಕೆ ಮಾಡುತ್ತಾರೆ. ನೈತಿಕ ಬೆಂಬಲಕ್ಕಾಗಿ ಒಬ್ಬ ಸಂಬಂಧಿ ರೋಗಿಯ ಜೊತೆಗಿರಬೇಕು ಎಂಬುದನ್ನು ಮೊದಲೇ ತಿಳಿಸುತ್ತಾರೆ.

ಇಂದಿನ ಕಾಲದಲ್ಲಿ ಹೆಂಡತಿ, ಮಕ್ಕಳೇ ನೋಡಿಕೊಳ್ಳುವುದಿಲ್ಲ. ಇಂತಹ ಸಂಕ್ರಮಣ ಕಾಲದಲ್ಲಿ ಶಾಮಕ ಆರೈಕಾ ಕೇಂದ್ರ ನಿರ್ವಹಿಸುತ್ತಿರುವ ಕಾರ್ಯ ಅಪೂರ್ವ ಪ್ರಶಂಸನೀಯ. ಇಷ್ಟಲ್ಲದೇ ಕೆಲವೇ ದಿನ ಬದುಕುವ ರೋಗಿ, ಕ್ಷೀಣನಾಗಿ ಶಾಮಕ ಆರೈಕಾ ಕೇಂದ್ರಕ್ಕೆ ತರಲು ಅಸಮರ್ಥರಾದರೆ, ಅಂತಹವರಿಗೆ ಮನೆಯವರು ಕರೆ ಮಾಡಿದರೆ ಸಿಬ್ಬಂದಿ ಮನೆಗೆ ಬಂದು ಚಿಕಿತ್ಸೆ ನೀಡುವುದು ಶ್ಲಾಘನಾರ್ಹ. ಬದುಕಿನ ಸಂಧ್ಯಾಕಾಲದಲ್ಲಿ ಕ್ಯಾನ್ಸರ್‌ಗೆ ತುತ್ತಾಗಿ ಆಸ್ಪತ್ರೆಯ ವೈದ್ಯರು ಕೈಚೆಲ್ಲಿ ಮನೆಗೆ ಕಳಿಸಿದ್ದೇ ಆದರೆ ಅಂಥ ರೋಗಿಗಳು ಇಲ್ಲಿ ಆಶ್ರಯ ಪಡೆಯಬಹುದು.

ಮಾಹಿತಿಗೆ: ಗೊರಟ್ಟಿ ಆಸ್ಪತ್ರೆ, ಸಂತೆಕಟ್ಟೆ, ಕಲ್ಯಾಣಪುರ.
ಫೋನ್: 9686272588/ 9480278545.